ಶ್ರೀ ಎಸ್. ಪುಟ್ಟಸ್ವಾಮಿ.—ಕಪಿನಿ ಪ್ರಾಜೆಕ್ಟಿನಲ್ಲಿ ಈ ಟೆಂಡರು ರೇಟಿಗಿಂತ ಹೆಚ್ಚು ನೆಗೋಷಿಯೇಟ್ ರೇಟನ್ನು ಗೊತ್ತು ಮಾಡಿ ಒಂದು ಯೂನಿಟ್ಟಿಗೆ 16 ರೂಪಾಯಿಗಳಂತೆ ಕೊಡುತ್ತಾ ಇರುವುದರಿಂದ ಸುವರ್ಣಾವತಿ ಪ್ರಾಜೆಕ್ಟಿಗೆ ಸಂಬಂಧಪಟ್ಟ ಕಂಟ್ರಾಕ್ಟರೂ ಕೂಡ ಒಂದು ಯೂನಿಟ್ಟಿಗೆ 16 ರೂಪಾಯಿಗಳನ್ನು ಕೊಡಬೇಕೆಂದು ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಿದ್ದಾರೆಯೇ, ಮತ್ತು ಆ ರೀತಿ ಅವರಿಗೆ ಕೊಡುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಅವರು ಮನವಿಯನ್ನು ಸಲ್ಲಿಸಿರುವ ವಿಚಾರ ಗೊತ್ತಿಲ್ಲ. ಅವರು ಏನು ಟೆಂಡರು ಹಾಕಿದ್ದಾರೆ ಆ ಟೆಂಡರು ರೇಟ್ ಪ್ರಕಾರ ಕೆಲಸ ಮಾಡುವುದು ಅವರ ಜವಾಬ್ದಾರಿ.

Appointment of Local M. L. A. as a Member of Rural Industrial Project

675. Sri GANGA BOVI (Gulur).—

Will the Minister for Industries, Information and Publicity be pleased to state :—

(*a*) the reason for not appointing the Local M. L. A. as a member of Rural Industrial Project even though the office of the said project is situated in Taluk Headquarters, Tumkur Taluk ;

(*b*) the number of members appointed to the said Committee ?

Sri A. P. APPANNA (Deputy Minister for Industries).—

(*a*) The member of the Legislative Assembly, Tumkur Constituency is the member of the State Level Committee for Rural Industries Projects, Bangalore. He attends Project Level Committee meeting as a special invitee.

(*b*) Fifteen.

ಶ್ರೀ ಗಂಗಾಬೋವಿ.—ಸ್ವಾಮಿ, ತುಮಕೂರು ಗ್ರಾಮಾಂತರ ಕೈಗಾರಿಕಾ ಪ್ರಾಜೆಕ್ಟಿಗೆ ಎಷ್ಟು ಜನ ಮೆಂಬರ್ಸ್ ಇದ್ದಾರೆ, ಗ್ರಾಮಾಂತರ ಕೈಗಾರಿಕೆಗಳಿಗಾಗಿ, ಗ್ರಾಮಾಂತರ ಪ್ರದೇಶದ ಎಷ್ಟು ಜನಗಳಿಗೆ ಎಷ್ಟು ಸಾಲವನ್ನು ಕೊಟ್ಟಿದ್ದೀರಾ ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಎ. ಪಿ. ಅಪ್ಪಣ್ಣ.—15 ಜನ ಇದ್ದಾರೆ. ವರ್ಷಂ ಪ್ರತಿ ಕೇಂದ್ರ ಸರ್ಕಾರದವರು ಈ ರಾಜ್ಯದಲ್ಲಿರುವಂತಹ 3 ರೂರರ್ ಇಂಡಸ್ಟ್ರಿಯರ್ ಪ್ರಾಜೆಕ್ಟ್ಗೆ 10–15 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಆ ಹಣವನ್ನು ಪೂರ್ತಿಯಾಗಿ ಮೂರು ಪ್ರಾಜೆಕ್ಟುಗಳಿಗೂ ನಾವು ಹಂಚಿ ಕೊಡುತ್ತೇವೆ.

ಶ್ರೀ ಗಂಗಾಬೋವಿ.—ಬೆಂಗಳೂರು ರೂರರ್ ಪ್ರಾಜೆಕ್ಟಿಗೆ ಯಾರು ಮೆಂಬರ್ ಆಗಿದ್ದಾರೆಯೋ ಅವರನ್ನೇ ತುಮಕೂರು ಗ್ರಾಮಾಂತರ ಕೈಗಾರಿಕಾ ಪ್ರಾಜೆಕ್ಟಿಗೂ ಮೆಂಬರಾಗಿ ನೇಮಿಸುವುದಕ್ಕೆ ಕಾರಣವೇನು ?

ಶ್ರೀ ಎ. ಪಿ. ಅಪ್ಪಣ್ಣ.—ತುಮಕೂರು ಅಥವಾ ಗುಬ್ಬಿ ಕ್ಷೇತ್ರದ ಯಾವ ಎಂ. ಎಲ್. ಎ. ಗಳು ಸ್ಟೇಟ್ ಲೆವೆಲ್ ಕಮಿಟಿಯಲ್ಲಿ ಇರುತ್ತಾರೆಯೋ ಅಂಥವರನ್ನು ತುಮಕೂರು ಗ್ರಾಮಾಂತರ ಕೈಗಾರಿಕಾ ಯೋಜನೆಯ ಸಮಿತಿಯ ಮೀಟಿಂಗಿಗೆ ಸ್ಪೆಷಲ್ ಇನ್‌ವೈಟೀಸ್ ಆಗಿ ಕರೆಸಿಕೊಳ್ಳಬೇಕೆಂದು ಪ್ರಾಜೆಕ್ಟ್ ಕಮಿಟಿಗೆ ನಾವು ಆದೇಶ ಕೊಟ್ಟಿದ್ದೇವೆ.

ಶ್ರೀ ಗಂಗಾಬೋವಿ.—ಹಾಗಾದರೆ ಆಯಾ ಸ್ಥಳದ ಎಂ. ಎಲ್. ಎ. ಗಳನ್ನು ಗ್ರಾಮಾಂತರ ಕೈಗಾರಿಕಾ ಯೋಜನಾ ಸಮಿತಿಗೆ ಏತಕ್ಕೆ ನೇಮಕ ಮಾಡಿಲ್ಲ, ಈಗ ನಾನು ಒಬ್ಬ ಸ್ಥಳೀಯ ಎಂ. ಎಲ್. ಎ. ನನ್ನನ್ನು ಏತಕ್ಕೆ ಆ ಸಮಿತಿಯಲ್ಲಿ ನೇಮಕ ಮಾಡಿಲ್ಲ ?

ಶ್ರೀ ಎ. ಪಿ. ಅಪ್ಪಣ್ಣ.—ಯಾರು ಸ್ಟೇಟ್ ಲೆವೆಲ್ ಕಮಿಟಿಯಲ್ಲಿ ಮೆಂಬರಾಗಿದ್ದಾರೆಯೋ ಅಂಥವರನ್ನು ಸ್ಪೆಷಲ್ ಇನ್‌ವಿಟೇಷನ್ ಕೊಟ್ಟು ಆ ಮೀಟಿಂಗಿಗೆ ಕರೆಸಿಕೊಳ್ಳುತ್ತಾರೆ. ಈಗ ಮಾನ್ಯ ಸದಸ್ಯರು ಸ್ಟೇಟ್ ಲೆವಲ್ ಕಮಿಟಿಯ ಮೆಂಬರಾಗಿದ್ದರೆ ತಮ್ಮನ್ನು ಮೀಟಿಂಗಿಗೆ ಕರೆಸಿ ಕೊಳ್ಳುತ್ತಿದ್ದರು. ತಾವು ಸ್ಟೇಟ್ ಲೆವೆಲ್ ಕಮಿಟಿಯ ಸದಸ್ಯರಾಗಿಲ್ಲ. ಆದಕ್ಕೋಸ್ಕರ ತಮ್ಮನ್ನು ಆ ಮೀಟಿಂಗಿಗೆ ಕರೆಸಿಕೊಳ್ಳಲಿಲ್ಲ.

ಶ್ರೀ ಗಂಗಾಬೋವಿ.—ಈಗ ತಾವು ಈ ಗ್ರಾಮಾಂತರ ಕೈಗಾರಿಕಾ ಯೋಜನೆಯ ಸಮಿತಿಗೆ ಯಾರನ್ನು ನೇಮಕ ಮಾಡಿದ್ದೀರೋ ಅವರೆಲ್ಲರೂ ಸ್ಟೇಟ್‌ಲೆವೆಲ್ ಕಮಿಟಿಯಲ್ಲಿ ಸದಸ್ಯರಾಗಿದ್ದಾರೆಯೇ ?

ಶ್ರೀ ಎ. ಪಿ. ಅಪ್ಪಣ್ಣ.—ಅಲ್ಲಿಗೆ ಇನ್‌ವೈಟ್ ಮಾಡತಕ್ಕವರು ನಾನ್‌ಅಫಿಷಿಯಲ್ ಮೆಂಬರಾಗಿದ್ದಾರೆ. ಮತ್ತು ಅವರೆಲ್ಲರೂ ಸ್ಟೇಟ್ ಲೆವೆಲ್ ಕಮಿಟಿಯಲ್ಲಿ ಇದ್ದಾರೆ.

Sri M. H. JAYAPRAKASH NARAYAN.—This is a policy matter, and the policy of the Government is to have at least one Scheduled Caste member in every Committee, Board or Corporation constituted by the Government. In view of that policy, why is it that there is no representation for Scheduled Castes here ?

Sri A. P. APPANNA.—I do not know how there can be a policy to the effect that in all the committees there must be representation for the Scheduled Castes. If it involves particularly the causes of the Scheduled Castes, then we will consider it.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ತುಮಕೂರು ತಾಲ್ಲೂಕಿನಲ್ಲಿ ಇರತಕ್ಕ ಗ್ರಾಮಾಂತರ ಕೈಗಾರಿಕ ಒಂದು ಸಂಸ್ಥೆ. ಆದುದರಿಂದ ಅಲ್ಲಿ ಹರಿಜನರಿಗೆ ಹೆಚ್ಚಿನ ಸಹಾಯ ಮಾಡುವ ಅವಶ್ಯಕತೆ ಇರುವುದರಿಂದ ಆ ಸ್ಥಳದಲ್ಲಿರತಕ್ಕ ಈ ಸಭೆಯ ಹರಿಜನ ಸದಸ್ಯರನ್ನೂ ಆ ಸಮಿತಿಯಲ್ಲಿ ನೇಮಕ ಮಾಡುವುದಕ್ಕೆ ಈಗಲಾದರೂ ಯೋಚನೆ ಮಾಡುತ್ತೀರಾ ?

Sri A. P. APPANNA.—This State Level Committee is due for reconstitution in June and this will be considered at that time.

Introduction of total Prohibition in the State

685. Sri D. M. SIDDAIAH (Biligere).—

Will the Minister for Finance, Planning and Youth Welfare be pleased to state :—

(*a*) the revenue realised by scrapping prohibition in our State for the last two years up to a convenient date ;

(*b*) the probable loss that Government may suffer if the total prohibition is introduced under the seven years phased programme ;

(*c*) whether the Government had stated that a blue print for the adoption of seven years phased programme of prohibition is being worked out ;